ಫಾರೆಸ್ಟ್ಸ್ ಇಲಾಖಾ.

ತಾರೀಖು 30ನೇ ಮೇ 1876.

ಇದರಿಂದ ತಿಳಿಯಪಡಿಸುವದೇನಂದರೆ,—ದಾರವಾಡ ಜಿಲ್ಲಾ ಕೋಡಿ ತಾಲ್ಲೂಕು ಫಕೀರಪ್ಪಯಂಬ ಹೆಸರುಳ್ಳ ವೊಬ್ಬ ಮನುಷ್ಯನು ಸ್ರ 1874ನೇ ಇಸವಿ ಏಪ್ರಿಲ್ ತಿಂಗಳಲ್ಲಿ ಕೊಂಡುಕ್ಕೊಂಡ ಚೌಬಿನೇ ಪೈಕಿ ಉಳಿಸಿಕೊಳ್ಳಲ್ಪಡದ ವೊಂದು ಮರದ ದಿಮ್ಮಿಯು ಕೇಳಲ್ಪಡದೆ ಅದ್ಯಾಪಿ ನಗರ ಡಿವಿಜ್ಞ ಶಿವವೊಗ್ಗಾ ಡಿಸ್ಟ್ರಿಕ್ಟು ಅನಂತಪುರ ಡಿಪೊಯಲ್ಲಿ ಬಿದ್ದಿರುತ್ತೆ. ಸದರೀ ಫಕೀರಪ್ಪನೆಂಬುವನು ಶಿವವೊಗ್ಗೆಯಲ್ಲಿರುವ ಡಿಪ್ಯುಟಿ ಕಂಸರ್ವೇಟರ್ ಯವರಲ್ಲಿ ಹಾಜರಾಗಿ 1876ನೇ ಇಸವಿ ಜುಲೈ 31ನೇ ಮುಕ್ತಂಮಿಗೆ ಮುಂಚಿತವಾಗಿ ಸದರೀ ದಿಮ್ಮಿಯನ್ನು ಸಾಗಿಸಿಕೊಂಡು ಹೋಗತಕ್ಕದ್ದು. ಯಿದಕ್ಕೆ ತಪ್ಪಿದರೆ ಸೆದರೀ ದಿಮ್ಮಿಯು ಬೇವಾರ್ಸ್ ಮುರದೋ ಪಾವಿಯಲ್ಲಿ ಮೈಸೂರು ಗವರ್ನಮೆಂಟ್ಗೆ ತಪ್ಪು ವಿಕ್ರಯಿಸಲ್ಪಟ್ಟು ಅದರ ಹುಟ್ಟುವಳಿಯು ಫಾರೆಸ್ಟು ರೂಲ್ಸ್ 30 ವ 31ರ ನಿಬಂಧನೇಗಳನುಸಾರವಾಗಿ ಮೈಸೂರು ಫಾರೆಸ್ಟು ಇಲಾಖೆಗೆ ಜಮೆ ಕಟ್ಟಲ್ಪಡುವದು.

G. J. VAN SOMEREN, *Captain,*
Conservator of Forests, Mysore & Coorg.

ASHTAGRAM DIVISION.

Notice regarding an application of Rahamat Bayi for a certificate under Act XXVII of 1860.

ಅಷ್ಟಗ್ರಾಮದ ಡಿ॥ ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರಲ್ಲಿ ಇರುವ ಹಾಜೀ ಜಾಫರ್ಶೇಟನ ಹೆಂಡತಿ ರಹಮತು ಬಾಯಿ ಯೆಂಬುವಳು ಫಾತೀಪಟ್ಟಿರುವ ತನ್ನ ಗಂಡನಿಗೆ ಹೊರಗಿನಿಂದ ಬರತಕ್ಕ ಸಾಲವನ್ನ ವಸೂಲ್ಮಾಡಿಕೊಳ್ಳುವದಕ್ಕೆ ತನ್ನ ಹೆಸರಿಗೆ 1860ನೇ ಇಸವಿ 27ನೇ ಆಕ್ಟ್ಸು ಪ್ರಕಾರ ಸರ್ಟಿಫಿಕೇಟ್ ಕೊಡಬೇಕೆಂತ ಕೊಟ್ಟ ಅರ್ಜೀ ಫೈಸಲ್ ಬಗ್ಯೆ 1876ನೇ ಇಸವಿ ಜುಲೈ 28ನೇ ದಿವಸ ನಿಷ್ಕರ್ಷೆ ಮಾಡಿರುವದರಿಂದ ತಕರಾರು ಇರತಕ್ಕವರೆಲ್ಲಾ ಮೇಲ್ಕಂಡ ತಾರೀಖು ಹಗಲು 11 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜಾಹಿರುಮಾಡಿಕೊಳ್ಳತಕ್ಕದ್ದಿದೆ.

ತಾರೀಖು 23ನೇ ಜೂನ್ 1876ನೇ ಇಸವಿ.

A. C. HAY,
Commr.

BANGALORE DISTRICT.

Notice regarding an application of J. Bakkanna for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟೀ ಕಮ್ಮಿಷನರವರ ಕೋರ್ಟಿನಿಂದ.

ಸ್ರ 1876ನೇ ಯಿಸವಿ ಸಿವಿಲ್ ಮಿಸಲೇನಿಯಸ್ ನಂಬರು 50.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ಆನೆಕಲ್ಲು ಕಸಬೆಯಲ್ಲಿ ಇರುವ ಜಕ್ಕಲ್ಲು ಬಕ್ಕಣ್ಣನೆಂಬುವನು ತನ್ನ ತಮ್ಮ ಪಟ್ಟಾಭಿರಯ್ಯ ಇವನ ಮಗ ರುದ್ರಪ್ಪನ ಲೇಕೆ 1000 ರೂಪಾಯಿ ಬರಮಾಡಿಕೊಳ್ಳತಕ್ಕ ಬಗ್ಗೆ ಸ್ರ 1860ನೇ ಯಿಸವಿ 27ನೇ ಆಕ್ಟ್ಸು ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ ಸ್ರ 1876ನೇ ಇಸವಿ —ಆಗಸ್ಟು 4ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಚಾರಿಸ ಆಗಲ್ಪಡುತ್ತೆಯಾಗಿ ಆ ಮೊಬಲಗ್ ಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕನ್ನ ಸ್ಥಾಪಿಸಿಕೊಡಬಹುದು.

ಬತಾರೀಖು 30ನೇ ಮಾಹೇ ಜೂನ್ ಸ್ರ 1876ನೇ ಇಸವಿ ಮೊಕ್ಕಾಂ ಯಲಹಂಕ.

L. RICKETTS,
Offg. Dy. Commr.